

## ಹಾಡುಗಳಿಗಾಗಿ ಮಾಡಿದ ಸಿನಿಮಾ!

ದೀಪಕ್ ತಿಮ್ಮಯ ನಿರ್ದೇಶನದ 'ನೀನೆ ಬರಿ ನೀನೆ' ಸಿನಿಮಾ ಗಣೇಶ ಹಬ್ಬದ (ಸೆ. 18) ಸಂದರ್ಭದಲ್ಲಿ ತೆರೆಕಾಣುತ್ತಿದೆ. ಸಂಗೀತಮಯ ಪ್ರೇಮಕಥನ ಎನ್ನುವುದು ತಮ್ಮ ಚಿತ್ರದ ಬಗ್ಗೆ ನಿರ್ದೇಶಕರ ಬಣ್ಣನೆ.

ಕೆಲವು ವರ್ಷಗಳ ಹಿಂದೆ ಹೊರಬಂದ 'ನೀನೆ ಬರಿ ನೀನೆ' ಎನ್ನುವ ಹಾಡುಗಳ ಆಲ್ಬಂ ದೀಪಕ್ ತಿಮ್ಮಯ ಅವರನ್ನು ಮರುಳುಗೊಳಿಸಿತ್ತು. ಆ ಹಾಡುಗಳ ಗುಂಗು ಕೇವಲ ಆಲ್ಬಂಗೆ ಕಳೆದುಹೋಗಬಾರದು ಎನ್ನುವ ಉದ್ದೇಶದಿಂದ, ಅದೇ ಗೀತೆಗಳನ್ನು ಬಳಸಿಕೊಂಡು ಅವರು ಸಿನಿಮಾ ರೂಪಿಸಿದ್ದಾರೆ. ಮನೋಮೂರ್ತಿ ಸಂಗೀತ ಸಂಯೋಜನೆಯ ಹತ್ತು ಹಾಡುಗಳು ಚಿತ್ರದ ಹೈಲೈಟ್ ಕೂಡ. ಮನೋಮೂರ್ತಿ ಅವರು ಮತ್ತೆ ಹೊಸದಾಗಿ ಸಂಗೀತ ಸಂಯೋಜಿಸಿದ್ದಾರಂತೆ.

ಅನೀಶ್, ದೀಪಿಕಾ ಕಾಮಯ್ಯ ಮುಖ್ಯ ಪಾತ್ರಗಳಲ್ಲಿರುವ 'ನೀನೆ ಬರಿ ನೀನೆ' ಚಿತ್ರದಲ್ಲಿ ಸಂಯುಕ್ತಾ ಹೊರನಾಡು ಅವರಿಗೂ ಪ್ರಮುಖ ಪಾತ್ರ ಇದೆಯಂತೆ. 'ಅನೀಶ್ ಅಭಿನಯ ಸೊಗಸಾಗಿದೆ' ಎಂದು ನಿರ್ದೇಶಕರು ಹೊಗಳಿದರೆ, ನಿರ್ದೇಶಕರ ಸಿನಿಮಾಪ್ರೀತಿಯನ್ನು ಕೊಂಡಾಡುವ ಅನೀಶ್, ಸಂಗೀತಮಯ ಚಿತ್ರದ ಒಂದು ಭಾಗವಾಗುವ ಅವಕಾಶ ತಮಗೆ ಒದಗಿ ಬಂದುದಕ್ಕೆ ಸಂತೋಷ ವ್ಯಕ್ತಪಡಿಸುತ್ತಾರೆ.

ಅಶೋಕ್ ಖೇಣಿ ಚಿತ್ರದ ನಿರ್ಮಾಪಕರು. ಒಳ್ಳೆಯ ಚಿತ್ರ ಮಾಡಿರುವ ಖುಷಿಯಲ್ಲಿರುವ ಅವರು, ತಮ್ಮ ಚಿತ್ರವನ್ನು ರಾಜ್ಯದ ಎಲ್ಲ ಭಾಗಗಳಿಗೂ ತಲುಪಿಸುವ ಪ್ರಯತ್ನದಲ್ಲಿದ್ದಾರೆ.

## ಹೊಸ ಮನಸು, ಹಳೆಯ ಕನಸು

ಯುವ ನಿರ್ದೇಶಕ ಮದನ್ 'ಎರಡು ಕನಸು' ಚಿತ್ರದ ಮೂಲಕ ಗಾಂಧಿನಗರ ಪ್ರವೇಶಿಸಿದ್ದಾರೆ. 'ಎರಡು ಕನಸು' 1974ರಲ್ಲಿ ತೆರೆಕಂಡ ರಾಜಕುಮಾರ್ ಅಭಿನಯದ ಯಶಸ್ವೀ ಚಿತ್ರ. ರಾಜ್, ಕಲ್ಪನಾ, ಮಂಜುಳಾ ಜೋಡಿಯ ಈ ಸಿನಿಮಾ ಕನ್ನಡ ಸಿನಿಮಾದ ಅಪೂರ್ವ ಪ್ರೇಮಕಥನಗಳಲ್ಲೊಂದು. ಈಗ ಅದೇ ಶೀರ್ಷಿಕೆಯಲ್ಲಿ ಹೊಸ ಪ್ರೇಮಕಥೆಯನ್ನು ಹೇಳಲು ಹೊರಟಿದ್ದಾರೆ ಮದನ್. ಅವರ ತಂದೆ ಅಶೋಕ್ ಕುಮಾರ್ ಮಗನ ಕನಸಿಗೆ ಬಂಡವಾಳ ಹೂಡುತ್ತಿದ್ದಾರೆ.



ಹಳೆಯ ಚಿತ್ರದಂತೆ ಹೊಸ ಚಿತ್ರದಲ್ಲೂ ನಾಯಕನಿಗೆ ಇಬ್ಬರು ನಾಯಕಿಯರಿದ್ದಾರೆ. ಪ್ರಜ್ಞ ಪೂವಯ್ಯ ಹಾಗೂ ಕಾರುಣ್ಯರಾಮ್ ಅವರುಗಳು ವಿಜಯ ರಾಘವೇಂದ್ರ ಅವರಿಗೆ ಜೋಡಿಯಾಗಿ ನಟಿಸುತ್ತಿದ್ದಾರೆ. ವಿಜಯ್ ಅವರದು ಗಂಭೀರ ಹುಡುಗನ ಪಾತ್ರವಂತೆ. 'ಎರಡು ಕನಸು' ಶೀರ್ಷಿಕೆಯನ್ನು ಕೇಳಿದಾಗ ವಿಜಯ್ ಕೊಂಚ ಅಳುಕಿದರೂ, ನಿರ್ದೇಶಕರು ಹೇಳಿದ ಕಥೆ ಕೇಳಿಸಿಕೊಂಡ ಮೇಲೆ ಚಿತ್ರದ ಕಥೆಗೂ ಈ ಶೀರ್ಷಿಕೆಗೂ ಇರುವ ಸಂಬಂಧವನ್ನು ಮನಗಂಡಿದ್ದಾರೆ. ಪ್ರಜ್ಞ–ಕಾರುಣ್ಯ ಅವರಿಗೂ ಕಥೆ ಖುಷಿಕೊಟ್ಟಿದೆ. ಪ್ರಜ್ಞ ಮಾಡ್ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದರೆ, ಕಾರುಣ್ಯ ಅವರದು ವಟಗುಟ್ಟುವ ಹುಡುಗಿಯ ಪಾತ್ರ. ಹಳೆಯ ಚಿತ್ರಕ್ಕೆ ರಾಜನ್–ನಾಗೇಂದ್ರ ಸಂಗೀತ ಸಂಯೋಜಿಸಿದ್ದರು. ಹೊಸ ಚಿತ್ರಕ್ಕೂ ಇಬ್ಬರು (ಸ್ಟೀವ್–ಕೌಶಿಕ್) ಸಂಗೀತ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿರುವುದು ವಿಶೇಷ.

ಮೇಲ್ನೋಟಕ್ಕೆ ಕಾಣಿಸುವ ಹೋಲಿಕೆಗಳನ್ನು ಹೊರತುಪಡಿಸಿದರೆ ತಮ್ಮ ಚಿತ್ರಕ್ಕೂ ರಾಜಕುಮಾರರ ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲ ಎನ್ನುತ್ತಾರೆ ಮದನ್. ನನ್ನ ಕಥೆಗೆ ಸೂಕ್ತವಾಗಿ ಹೊಂದುವ ಕಾರಣದಿಂದಷ್ಟೇ 'ಎರಡು ಕನಸು' ಶೀರ್ಷಿಕೆ ಆರಿಸಿಕೊಂಡಿರುವೆ" ಎನ್ನುವ ಅವರು, ಪ್ರೇಮ, ಸಾಹಸ ಹಾಗೂ ಹಾಸ್ಯಪ್ರಧಾನವಾದ ಕಥೆಯನ್ನು ತಮ್ಮ ಚಿತ್ರದಲ್ಲಿ ನಿರೂಪಿಸುತ್ತಿದ್ದಾರಂತೆ.

■ ರಘು